# ಲಾಲಿ ಲಾಲಿ

ಪ್ರೇಮದಲ್ಲಿ ಪ್ರತಿಯೊಬ್ಬರೂ ಕವಿ ಎನ್ನುವ ಮಾತಿದೆ. ಈ ಮಾತಿನ ಮುಂದುವರಿಕೆಯಾಗಿ, 'ಪ್ರತಿಯೊಬ್ಬ ತಾಯಿಯೂ ಕವಿ' ಎಂದು ಹೇಳಬಹುದು. ಕವಿ ಆಗುವುದು ಪ್ರತಿ ಪ್ರೇಮಿಗೂ ಶಕ್ಯವಾಗದಿರಬಹುದು. ಆದರೆ, ಪ್ರತಿ ತಾಯಿಯೂ ಕವಿಯೇ. ಮಗುವಿನ ಆಗಮನದಿಂದ ಅವಳು ತಾಯಿಯಾಗುತ್ತಾಳೆ, ಕವಿಯಾಗುತ್ತಾಳೆ. ಅಜ್ಜಿ ಅಮ್ಮಂದಿರ ಮೂಲಕ ಲಾಲಿ ಪದಗಳ ಕಡ ಪಡೆದರೂ, ಆ ಹಾಡಿನಲ್ಲಿ ತನ್ನೊಡಲ ಸೊಲ್ಲನ್ನೂ ಸೇರಿಸುತ್ತಾಳೆ.

ಅಮ್ಮ ಕವಿ ಎನ್ನುವುದೇನೋ ಸರಿ. ಆ ಕಾವ್ಯದ ಬಂಡುಣ್ಣುವ ಫಲಾನುಭವಿಗಳು ಮಕ್ಕಳು. ತೊಟ್ಟಿಲಲ್ಲಿ ಕಂದನ ಮಲಗಿಸುವುದರೊಂದಿಗೆ ಅಮ್ಮನ ಕಾವ್ಯ ಕಸುಬು ಶುರುವಾಗುತ್ತದೆ – ಜೋಗುಳದ ಮೂಲಕ. ಎಲ್ಲ ಹೆಣ್ಣುಮಕ್ಕಳೂ ಹಾಡುವ ಕಲೆಯಲ್ಲಿ ಬಲ್ಲವರಲ್ಲವಷ್ಟೆ. ಉಳಿದೆಡೆಗಳಲ್ಲಿ ಬಾಯಿಯೇ ತೆರೆಯದವರು ತಂತಮ್ಮ ಮಕ್ಕಳೆದುರು ಕೋಗಿಲೆಗಳಾಗಿಬಿಡುತ್ತಾರೆ. ಮಗುವಿನ ಎದುರು ಎಂಥ ಮುಚ್ಚುಮರೆ. ಮನದ ಮರೆಯ ಭಾವಗಳೆಲ್ಲ ಹಾಡಾಗಿ ಉಕ್ಕಿ ಜೋಗುಳವಾದರೆ ಕಂಠ ಎಂಥದಾದರೂ ಕೊಳಲಾಗಿ ನುಡಿಯಲೇಬೇಕು.

ಮಗುವನ್ನು ಮಲಗಿಸುವಾಗ ಹಾಡುವ ಹಾಡೇ ಜೋಗುಳ. ಲಾಲಿ ಹಾಡು, ದೂರಿ ಹಾಡು ಎಂದೂ ಜೋಗುಳಕ್ಕೆ ಹೆಸರಿದೆ. 'ತೂಗುವೆ ರಂಗನ ತೂಗುವೆ ಕೃಷ್ಣನ' ಎಂದು ಅಮ್ಮ ಹಾಡುತ್ತಿದ್ದರೆ, ಆ ಕ್ಷಣದಲ್ಲಿ ಮನೆಯೇ ಗೋಕುಲ, ತೊಟ್ಟಿಲಲ್ಲಿ ಕೃಷ್ಣಾವತಾರ.

ಜೋಗುಳದಲ್ಲಿ ಹಾಡಿನ ಸಾಹಿತ್ಯಕ್ಕಿಂತಲೂ ನಾದಮಯತೆಗೆ ಹೆಚ್ಚಿನ ಆದ್ಯತೆ. ದೂರಿ ದೂರಿ ಎನ್ನುವ ಆಲಾಪ ಇಲ್ಲವೇ ಜೋ ಜೋ ಎನ್ನುವ ಅನುರಣನಕ್ಕೆ ಮಗುವನ್ನು ಮೈಮರೆಸಿ ನಿದ್ರೆಗೆ ದೂಡುವ ಶಕ್ತಿಯಿದೆ. ಸಂಗೀತಕ್ಕೆ ಮನಸ್ಸನ್ನು ಆರ್ದ್ರಗೊಳಿಸುವ ಗುಣವಿದೆಯಷ್ಟೆ. ದೊಡ್ಡವರನ್ನು ಮಾತ್ರವಲ್ಲ, ಹಸುಗೂಸುಗಳನ್ನೂ ಸಂಗೀತ ಸೆಳೆಯುತ್ತದೆ. ಚಿತ್ತ ಚಾಂಚಲ್ಯವನ್ನು ಶಮನಗೊಳಿಸಿ ಮನಸ್ಸನ್ನು ನಿದ್ದೆಗೆ ಅಣಿಗೊಳಿಸುತ್ತದೆ. ಅಮ್ಮನ ಸ್ಪರ್ಶ ಮಯ್ಯಿಗೆ ತಿಳಿಯುವಂತಹದ್ದು. ಅವಳ ಧ್ವನಿ ಮನಸ್ಸಿಗೆ ವೇದ್ಯವಾಗುವಂತಹದ್ದು. ತನ್ನ ಭಾವ–ಭಾಷೆಯನ್ನು ಜೋಗುಳದ ರೂಪದಲ್ಲಿ ಮಗುವಿಗುಣಿಸುವ ಪ್ರಯತ್ನವನ್ನು ಅಮ್ಮ ಮಾಡುತ್ತಾಳೆ.

ಲಾಲಿ ಹಾಡಿನಲ್ಲಿ ನಾದಕ್ಕೆ ಪ್ರಾಶಸ್ತ್ಯ ಎಂದಮಾತ್ರಕ್ಕೆ ಸಾಹಿತ್ಯ ನಗಣ್ಯವೆಂದು ಅರ್ಥವಲ್ಲ. ಮಗುವಿಗೆ ಸಾಹಿತ್ಯ ಅರ್ಥವಾಗದಿರಬಹುದು. ಆದರೆ, ಹಾಡುವ ತಾಯಿಗೆ ಅರ್ಥ ತಿಳಿಯುತ್ತದಷ್ಟೆ. ಆಕೆ, ಕಂದನ ಮೇಲಿನ ತನ್ನ ಪ್ರೀತಿ ಹಾಗೂ ನಿರೀಕ್ಷೆಗಳನ್ನು ಹಾಡಿನಲ್ಲಿ ಅಭಿವ್ಯಕ್ತಿಸುತ್ತಾಳೆ. ಕುಟುಂಬದ ಹಿನ್ನೆಲೆ ಏನೇ ಇರಲಿ, ತನ್ನ ಒಡಲ ಕಂದ ರಾಜಕುಮಾರನೆಂದೇ ತಾಯಿಯ ಎಣಿಕೆ. ರಾಜಕುಮಾರ ಮಾತ್ರವಲ್ಲ, ಸಾಕ್ಷಾತ್ ದೈವ ಕೂಡ. 'ಜೋ ಜೋ ಶ್ರೀಕೃಷ್ಣ ಪರಮಾನಂದ, ನಂದ ಗೋಪಿಯ ಕಂದ ಬಾಲ ಮುಕುಂದ... ಜೋ ಜೋ' ಎಂದು ಹಾಡುವ ತಾಯಿಯ ಪಾಲಿಗೆ ತನ್ನ ಕಂದ ಕೃಷ್ಣನ ಅವತಾರವೇ. ಮಕ್ಕಳು ದೈವದ ಸ್ವರೂಪ ಎನ್ನುವ ನಂಬಿಕೆಗೆ ಲಾಲಿ ಹಾಡುಗಳು ಅಡಿಗೆರೆ ಎಳೆಯುವಂತಹವು. ತನ್ನ ಹರಕೆ ಹಾರೈಕೆಗೆ ತಕ್ಕಂತೆ ಮಗುವಿನ ಮನೋಭಾವ ರೂಪುಗೊಂಡು, ಒಳ್ಳೆಯ ವ್ಯಕ್ತಿತ್ವವನ್ನು ಪಡೆದುಕೊಳ್ಳಲಿ ಎಂದು ಲಾಲಿ ಹಾಡಿನ ಮೂಲಕ ತಾಯಿ ಬಯಸುವುದು ಸಹಜವೇ ಆಗಿದೆ.

ಅಮ್ಮ–ಮಗುವಿನ ನಡುವಿನ ಜೋಗುಳ ಕೆಲವೊಮ್ಮೆ ತನ್ನ ಚೌಕಟ್ಟನ್ನು ವಿಸ್ತರಿಸಿಕೊಳ್ಳುವುದೂ ಇದೆ. ಸುರಿವ ಮಳೆ ಭೂತಾಯಿಗೆ ಮುಗಿಲು ಹಾಡಿದ ಲಾಲಿಯಂತೆ ಕಾಣಿಸುತ್ತದೆ. ಬೆಳುದಿಂಗಳ ಅಲೆಯಲ್ಲಿ, ಹರಿವ ನದಿಯಲ್ಲಿ, ಗಾಳಿಯುಲಿಯಲ್ಲಿ ಜೋಗುಳವಿದೆ.

'ಸ್ವಾತಿಮುತ್ತು' ಚಿತ್ರದ ಲಾಲಿಹಾಡು, 'ಶ್ರೀಚಕ್ರಧಾರಿಗೆ ಶಿರಬಾಗಿ ಲಾಲಿ, ರಾಜೀವ ನೇತ್ರನಿಗೆ ರಮಣೀಯ ಲಾಲಿ, ಜಗವಾಳೊ ಸ್ವಾಮಿಗೆ ಪದಮಾಲೆ ಲಾಲಿ' ಎಂದು ಎಲ್ಲ ಅಮ್ಮಂದಿರ ಹಾಡಿನಂತೆ ಶುರುವಾದರೂ, 'ಕನಕದಾಸರದು ಕೃಷನಿಗೆ ಲಾಲಿ, ಲಿಂಗಕ್ಕೆ ಜಂಗಮರ ವಚನಗಳ ಲಾಲಿ' ಎನ್ನುವ ಮೂಲಕ ಲಾಲಿ ಹಾಡಿಗೆ ಹೊಸತೊಂದು ವಿಸ್ತರಣೆಯನ್ನು ನೀಡುತ್ತದೆ. ಕೃಷ್ಣನ ಕುರಿತ ಕನಕದಾಸರ ಭಕ್ತಿಯನ್ನು ಜೋಗುಳವೆನ್ನುವ ಕವಿ, ವಚನ ಸಾಹಿತ್ಯವನ್ನು ಲಿಂಗಕ್ಕೆ ಜಂಗಮರ ಜೋಗುಳದ ನಿವೇದನೆ ಎನ್ನುತ್ತಾನೆ. ಎಂಥ ಅದ್ಭುತ ಕಲ್ಪನೆ. ತಾಯಿ ಮತ್ತು ಮಗುವಿನ ಜೋಗುಳದಲ್ಲಿ ಪ್ರೇಮ ಸ್ಥಾಯಿಭಾವವಾಗಿದ್ದರೆ, ದೇವರು ಮತ್ತು ಭಕ್ತನ ನಡುವಿನ ಜೋಗುಳದ ನೆಲೆಗಟ್ಟಿನಲ್ಲಿರುವುದು ದೈವಕ್ಕೆ ಶರಣೆನ್ನುವ ಭಕ್ತಿ. ಈ ಭಕ್ತಿ ಭಾವದಲ್ಲೇ, 'ಪವಡಿಸು ಪರಮಾತ್ಮ ಶ್ರೀ ವೆಂಕಟೇಶ, ಸಪ್ತಗಿರಿವಾಸ, ಮನವೆಂಬ ಮಲ್ಲಿಗೆಯ ಹೂವ ಹಾಸಿಗೆ ಮೇಲೆ' ('ಶ್ರೀನಿವಾಸ ಕಲ್ಯಾಣ' ಸಿನಿಮಾದ ಗೀತೆ) ಎನ್ನುವ ಜೋಗುಳ ರೂಪುಗೊಳ್ಳುತ್ತದೆ.

ಅಮ್ಮನನ್ನು ಕವಿ ಎಂದೆವು. ಕವಿಯೂ ಒಬ್ಬ ಅಮ್ಮ ಎಂದು ಹೇಳಿದರೆ ಹೇಗೆ? ಅವನ ಪಾಲಿಗೆ ಪದಗಳು, ಭಾಷೆಯ ಮೂಲಕ ಸೃಷ್ಟಿಯಾಗುವ ರಚನೆಗಳೇ ಕಂದಮ್ಮಗಳು. ಕವಿ ಅಮ್ಮನಾದಾಗ ಜೋಗುಳದ ನಿರೀಕ್ಷೆ ಮತ್ತೂ ಘನವಾಗುತ್ತದೆ. ಕುವೆಂಪು ಅವರ 'ಕನ್ನಡಮ್ಮನ ಹರಕೆ' ಕವಿತೆಯಲ್ಲಿ ಕನ್ನಡದೇವಿ ತನ್ನ ಮಕ್ಕಳನ್ನುದ್ದೇಶಿಸಿ ಹಾಡುತ್ತಿದ್ದಾಳೆ. ಆ ತಾಯಿಯ ನಿರೀಕ್ಷೆ ನೋಡಿ:

'ಕನ್ನಡಕೆ ಹೋರಾಡು / ಕನ್ನಡದ ಕಂದಾ; / ಕನ್ನಡವ ಕಾಪಾಡು / ನನ್ನ ಆನಂದಾ! / ಜೋಗುಳದ ಹರಕೆಯಿದು / ಮರೆಯದಿರು, ಚಿನ್ನಾ; / ಮರೆತೆಯಾದರೆ ಅಯ್ಯೊ / ಮರೆತಂತೆ ನನ್ನ!'

ಕನ್ನಡಮ್ಮನ ಹರಕೆ ಹುಸಿಯಾದರೆ ಅದು ಮಗು ತಾಯಿಯನ್ನು ಮರೆತಂತೆ ಎನ್ನುವ ಮಾತಿನಲ್ಲಿ ನಮ್ಮೆಲ್ಲರ ಬದುಕಿಗೂ ಪಾಠವಿರುವಂತಿದೆ. ನಾವೆಂದಾದರೂ ಅಮ್ಮನ ಜೋಗುಳದ ಕುರಿತು ಯೋಚಿಸಿದ್ದೇವೆಯೆ? ಆ ಜೋಗುಳದ ಮಮತೆ ಹಾಗೂ ನಿರೀಕ್ಷೆಗಳಿಗೆ ಉತ್ತರದಾಯಿಗಳಾಗುವ ಪ್ರಯತ್ನ ನಡೆಸಿದ್ದೇವೆಯೆ? ಅನಾಯಾಸವಾಗಿ ದೊರೆತ ಅಮ್ಮನೆಂಬ ಮಹಾಕಾವ್ಯಕ್ಕೆ ಸಹೃದಯರಾಗಿ ಎಷ್ಟು ನ್ಯಾಯ ಒದಗಿಸಿಕೊಟ್ಟಿದ್ದೇವೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರಲ್ಲಿ ನಮ್ಮ ಬದುಕಿನ ಸಾರ್ಥಕತೆಯಿದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ನಮ್ಮ ಸ್ವಭಾವ, ಸಂದರ್ಭ– ಇವೆರಡನ್ನೂ ನಾವು ಕಂಡುಕೊಂಡು ನಮಗೆ ತಕ್ಕ ಗುರಿ ಯಾವುದು, ತಕ್ಕ ದಾರಿ ಯಾವುದು ಎಂಬುದನ್ನೂ ನಾವೇ ಗೊತ್ತು ಮಾಡಿಕೊಳ್ಳಬೇಕು.

  —ಡಿ.ವಿ. ಗುಂಡಪ್ಪ
- ನಮ್ಮ ವಿಚಾರಗಳನ್ನು ಮಾತೃಭಾಷೆಯಲ್ಲಿ ಸರಳವಾಗಿ ಮತ್ತು ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯವಾಗುವಂತೆ, ಬೇರೆ ಯಾವ ಭಾಷೆಯಲ್ಲೂ ವ್ಯಕ್ತಪಡಿಸಲು ಆಗುವುದಿಲ್ಲ.

  —ಮಹಾತ್ಮ ಗಾಂಧಿ
- ಪ್ರತಿಯೊಬ್ಬನೂ ತನಗೆ ತಾನೇ ವಿಕಾಸಗೊಂಡು ತನ್ನ ಮಟ್ಟವನ್ನು ಮುಟ್ಟಬೇಕು.

  —ಎಂ. ಗೋಪಾಲಕೃಷ್ಣ ಅಡಿಗ
- ಯಾರಾದರೂ ಕೃತಘ್ನರಾದರೆ ಅದು ಅವರ ದೋಷ. ಆದರೆ, ನೀನು ಸಜ್ಜನಿಕೆ ತೋರದಿದ್ದರೆ ಅದು ನಿನ್ನ ದೋಷ.

  —ಅ.ನ. ಕೃಷ್ಣರಾಯ
- ಪುಸ್ತಕಗಳಲ್ಲಿ ಹಳೆಯವೆಂಬುವೇ ಇಲ್ಲ. ಓದಿರದ ಪುಸ್ತಕಗಳೆಲ್ಲ ಹೊಸವು; ಮತ್ತೆ ಮತ್ತೆ ಓದಬೇಕೆನ್ನುವ ಪುಸ್ತಕಗಳೆಲ್ಲ ಹೊಸವು.

  —ಹಾ.ಮಾ. ನಾಯಕ
- ಬೇಸರವೇ ಇಲ್ಲ ಈ ನಿಸರ್ಗಕ್ಕೆ, ಸದಾ ಹೊಚ್ಚ ಹೊಸದಾಗಿ ಹೊಮ್ಮುವುದಕ್ಕೆ.

  —ಜಿ.ಎಸ್. ಶಿವರುದ್ರಪ್ಪ
- ಬಾಳು ಇರುವುದು ಬದುಕುವುದಕ್ಕಾಗಿ; ಬದುಕು ಬೆಳೆಯುವುದಕ್ಕಾಗಿ.

  —ಕೆ. ಶಿವರಾಮ ಕಾರಂತ
- ಕಾಲಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರೀ ಅಲಂಕಾರವಷ್ಟೇ.

  —ಕೆ.ಎಸ್. ನಿಸಾರ್ ಅಹಮದ್